<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ಹಾಗೂ ಭ್ರಷ್ಟಾಚಾರ ನಿಗ್ರಹ ಪ್ರಕರಣಗಳ ಅಧಿವಿಚಾರಣ ವಿಶೇಷ ನ್ಯಾಯಾಲಯ, ಕೋಲಾರ</u>

**Spl. C. (P.C.) 09/2014**

ಪ್ರಾಸಾಃ **19** ಚಾಸಾಃ **53**
ದಿನಾಂಕಃ **09-04-2026**

| | |
|---|---|
| ಹೆಸರು | :: ಸಿ. ದೇವರಾಜ್ |
| ತಂದೆಯ ಹೆಸರು | :: ಚಿನ್ನಪ್ಪ |
| ವಯಸ್ಸು | :: 47 ವರ್ಷ |
| ಉದ್ಯೋಗ | :: ಅಡುಗೆ ಕೆಲಸ |
| ವಾಸ ಸ್ಥಳ | :: ಖಾದ್ರಿಪುರ, ಕೋಲಾರ ನಗರ |

<u>ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.</u>

<u>ಮುಖ್ಯ ವಿಚಾರಣೆಃ ವಿಶೇಷ ಸಾರ್ವಜನಿಕ ಅಭಿಯೋಗಕರಿಂದಃ</u>

1. ನಾನು 1997 ರಲ್ಲಿ ಡಾ.. ಅಂಬೇಡ್ಕರ್ ಹಾಸ್ಟೆಲ್ ನಲ್ಲಿ ಅಡುಗೆ ಸಹಾಯಕನಾಗಿ ನೇಮಕವಾದೆ. 2008 ರಿಂದ 2018 ರವರೆಗೆ ಅಡುಗೆ ಮಾಡುವವನಾಗಿ ಕೋಲಾರದ ಸರ್ಕಾರಿ ಕಾನೂನು ಕಾಲೇಜು ವಿದ್ಯಾರ್ಥಿ ನಿಲಯದಲ್ಲಿ ಕೆಲಸ ಮಾಡಿದ್ದೇನೆ. 2011-12 ನೇ ಸಾಲಿನಲ್ಲಿ ನನಗೆ ತಿಂಗಳಿಗೆ ರೂ.6,951/- ಸಂಬಳ ಕೊಡುತ್ತಿದ್ದರು. ಸಂಬಳದ ಚೆಕ್ ಪಡೆಯಲು ವಾರ್ಡನ್ ನಮ್ಮನ್ನು ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಯವರ ಕಛೇರಿಗೆ ಕರೆದುಕೊಂಡು ಬರುತ್ತಿದ್ದರು. ಅಲ್ಲಿ ರಿಜಿಸ್ಟರ್ ನಲ್ಲಿ ಸಹಿ ಮಾಡಿ ಚೆಕ್ಕನ್ನು ಪಡೆಯುತ್ತಿದ್ದೆವು. ದಿನಗೂಲಿಯನ್ನು ಯಾವತ್ತೂ ನಗದು ರೂಪದಲ್ಲಿ ಕೊಟ್ಟಿಲ್ಲ. 2011-12 ರಲ್ಲಿ ನಮ್ಮ ಹಾಸ್ಟೆಲ್ ನ ವಾರ್ಡನ್ ಮೊಹಮ್ಮದ್ ಅಬ್ದುಲ್ ಅಜೀನ್ (2 ನೇ ಆರೋಪಿ) ಇದ್ದರು.

2. 2011-12 ರಲ್ಲಿ ಸದರಿ ಹಾಸ್ಟೆಲ್ ನಲ್ಲಿ ನಾನು, ಎಂ. ಶ್ರೀನಿವಾಸಪ್ಪ ಮತ್ತು ನಾರಾಯಣಮ್ಮ ಮೂವರೂ ಅಡುಗೆ ಕೆಲಸ ಮಾಡುತ್ತಿದ್ದೆವು. 2012 ರಲ್ಲಿ ಒಂದು ಸಾರಿ ಲೋಕಾಯುಕ್ತ ಕಛೇರಿಗೆ ನನ್ನನ್ನು ಕರೆಸಿದ್ದರು. ಅಲ್ಲಿ ಈಗ ತೋರಿಸಿದ ದಾಖಲೆಯನ್ನು ತೋರಿಸಿದರು. ಸಾಕ್ಷಿಗೆ ತೋರಿಸಿದ ದಾಖಲೆ ನಿ ಪಿ 520 ರ ಹಣ ಸಂದಾಯ ರಸೀದಿ ಇದೆ. ಅದನ್ನು ನಿ ಪಿ 520(ಎ) ಎಂದು ಗುರುತಿಸಲಾಯಿತು. ನಿ ಪಿ 520(ಎ) ನಲ್ಲಿ ಹೇಳಿರುವ ರಾಧಮ್ಮ,

ಹನುಮಪ್ಪ, ಚೆನ್ನಕೇಶವ ಮತ್ತು ರಾಮಕ್ಕ ಇವರು ನಮ್ಮ ಹಾಸ್ಟೆಲ್ ನಲ್ಲಿ ಯಾವತ್ತೂ ಕೆಲಸ ಮಾಡಿಲ್ಲ ಮತ್ತು ಅವರು ಯಾರು ಎಂದು ನನಗೆ ಗೊತ್ತಿಲ್ಲ.

ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ಎಂ.ಹೆಚ್ ವಕೀಲರಿಂದಃ

3. ನಿಮ್ಮ ಹಾಸ್ಟೆಲ್ ನಲ್ಲಿ ಹಾಜರಾತಿ ಪುಸ್ತಕವನ್ನು ನಿರ್ವಹಿಸಿದ್ದಾರಾ ಎಂದರೆ ಸಾಕ್ಷಿದಾರರು ವಾರ್ಡನ್ ರವರು ಹಾಜರಾತಿ ಬರೆದುಕೊಳ್ಳುತ್ತಿದ್ದರು ಎನ್ನುತ್ತಾರೆ. ಹಾಜರಾತಿ ಪುಸ್ತಕಕ್ಕೆ ನೀವು ಸಹಿ ಮಾಡಿದ್ದೀರಾ ಎಂದರೆ ಇಲ್ಲ ಎನ್ನುತ್ತಾರೆ. ಲೋಕಾಯುಕ್ತ ಕಛೇರಿಗೆ ನನ್ನನ್ನು ಕರೆಸಿರಲಿಲ್ಲ ಮತ್ತು ನಿ ಪಿ 520(ಎ) ಇದನ್ನು ನನಗೆ ತೋರಿಸಿಲ್ಲ ಎಂದರೆ ಸರಿಯಲ್ಲ.

ಪಾಟೀ ಸವಾಲುಃ 3 ನೇ ಆರೋಪಿ ಪರ ಶ್ರೀ ಪಿ.ಎನ್.ಕೆ ವಕೀಲರು ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವುದಾಗಿ ತಿಳಿಸುತ್ತಾರೆ.

ಪಾಟೀ ಸವಾಲುಃ 5, 6 ಮತ್ತು 7 ನೇ ಆರೋಪಿತರ ಪರ ವಕೀಲರು ತಮ್ಮ ಪರವಾಗಿ ಈ ಸಾಕ್ಷಿಯ ಪಾಟೀ ಸವಾಲು ಇಲ್ಲ ಎಂದು ತಿಳಿಸುತ್ತಾರೆ.

ಮರು ವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ಅವರ ಹೇಳಿಕೆಯನ್ನು ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿ, ಪುನಃ ಓದಿ ಹೇಳಲಾಯಿತು ಮತ್ತು ಸಾಕ್ಷಿದಾರರು ಸರಿ ಇದೆ ಎಂದು ತಿಳಿಸುತ್ತಾರೆ.)

ಓ. ಹೇ. ಕೇ. ಸ. ಇದೆ,

(ವಿಜಯಕುಮಾರ್ ಎಂ. ಆನಂದಶೆಟ್ಟಿ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೋಲಾರ